ಪಾಕ್ಷಿಕ

# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ



**ನವದೆಹಲಿ:** ಚೊಚ್ಚಲ ಆವೃತ್ತಿಯ ಖೋ ಖೋ ವಿಶ್ವಕಪ್ ಫೈನಲ್ ಪಂದ್ಯದಲ್ಲಿ ವಿಜೇತ ಭಾರತ ತಂಡದ ಪರವಾಗಿ ಅದ್ಭುತ ಪ್ರದರ್ಶನ ತೋರಿದ ಟಿ.ನರಸಿಪುರದ ಕುರುಬೂರಿನ ಚೈತ್ರ ಬಿ ಅವರಿಗೆ ಮುಖ್ಯ ಅತಿಥಿಗಳಲ್ಲಿ ಒಬ್ಬರಾದ ಆರ್‌ಎಸ್‌ಎಸ್‌ನ ಅಖಿಲ ಭಾರತೀಯ ಸಂಪರ್ಕ ಪ್ರಮುಖ್ ರಾಮ್ ಲಾಲ್ 'ಉತ್ತಮ ಆಟಗಾರ್ತಿ' ಪ್ರಶಸ್ತಿ ನೀಡಿ ಅಭಿನಂದಿಸಿದರು.

ಸಂಪುಟ : 46 | ಸಂಚಿಕೆ : 19 | ಮಾಘ | ಕಲಿಯುಗಾಬ್ದ 5126 | 01–02–2025 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4

## ಭರತವರ್ಷದ ಆಧ್ಯಾತ್ಮಿಕ-ಸಾಮಾಜಿಕ ಏಕತೆಯ ಸಾಕಾರರೂಪ ಮಹಾಕುಂಭಮೇಳ

ಭರತವರ್ಷದ ಐತಿಹ್ಯ, ಅದರ ಆಧ್ಯಾತ್ಮಿಕತೆಯ ಮೂಲ ಸಹಸ್ರಾರು ವರ್ಷಗಳಷ್ಟು ಹಿಂದಿನದ್ದಾಗಿದೆ. "ನ ಆದಿ ನ ಅಂತ್ಯ" ಎಂಬಂತೆ ಆದಿಯೂ ಇಲ್ಲದ ಅಂತ್ಯವೂ ಇಲ್ಲದ ಆಧ್ಯಾತ್ಮಿಕತೆಯ ಪ್ರತೀಕವಾಗಿ ಇಲ್ಲಿನ ಆಚರಣೆಗಳು ನಿಂತಿವೆ. ಈ ಎಲ್ಲ ಆಚರಣೆಗಳ ಹರಿವೂ ಕೂಡ ಸೃಷ್ಟಿ, ಸ್ಥಿತಿ ಮತ್ತು ಲಯದ ಪ್ರತೀಕವಾಗಿರುವ ಋತುವಿನ ಚಲನೆಗನುಸಾರವಾಗಿ ಇರುತ್ತದೆಂಬುದು ಮಗದೊಂದು ವಿಶೇಷ. ಇದರ ಭಾಗವಾಗಿಯೇ 2025ರ ಮಹಾಕುಂಭಮೇಳವನ್ನು ಕೂಡ ನಾವು ಕಾಣಬಹುದಾಗಿದೆ. ಒಂದೆಡೆ ವಿಶ್ವದ ದಿಗ್ಗಜ ರಾಷ್ಟ್ರಗಳ ಅನೇಕ ಗಣ್ಯವ್ಯಕ್ತಿಗಳು, ಅಲ್ಲಿನ ಸಮುದಾಯಗಳು ಸೇರಿದಂತೆ ಎಲ್ಲರ ಕಣ್ಮನಗಳನ್ನು ತನ್ನತ್ತ ಸೆಳೆದಿರುವ 'ಮಹಾಕುಂಭ' ಮತ್ತೊಂದೆಡೆ ತನ್ನೊಡಲಲ್ಲಿ 'ಅಧ್ಯಾತ್ಮ ಸಾಧನೆಯ' ಇಚ್ಛೆಯನ್ನು ಹೊತ್ತುಬರುವ ಅನೇಕ ಜೀವಾತ್ಮಗಳಿಗೆ ಮಡಿಲಾಗಿ ನಿಂತಿದೆ. ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ 144 ವರ್ಷಗಳ ನಂತರ ಮಹಾಕುಂಭ ಮೇಳ ನಡೆಯುತ್ತಿದೆ. ಈ ಬಾರಿ ನಡೆಯುತ್ತಿರುವ ಕುಂಭಮೇಳದಲ್ಲಿ ಸುಮಾರು 45 ಕೋಟಿಗೂ ಅಧಿಕ ಮಂದಿ ಪುಣ್ಯ ಸ್ನಾನ ಮಾಡುವ ಸಾಧ್ಯತೆ ಇದೆ ಎಂದು ನಿರೀಕ್ಷಿಸಲಾಗುತ್ತಿದೆ.

### ಮಹಾಕುಂಭ ಎಂದರೇನು?

ಮಹಾಕುಂಭವನ್ನು ಧಾರ್ಮಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ವಿಶ್ವದ ಅತಿದೊಡ್ಡ ಮೇಳ ಎಂದು ಹೇಳಲಾಗುತ್ತದೆ. ಈ ಮೇಳ ಭಾರತದ 4 ಸ್ಥಳಗಳಲ್ಲಿ (ಪ್ರಯಾಗರಾಜ್, ಹರಿದ್ವಾರ, ನಾಸಿಕ್ ಮತ್ತು ಉಜ್ಜಯಿನಿ) ಮಾತ್ರ ನಡೆಯುತ್ತದೆ. ಮಹಾಕುಂಭದ ಸಮಯದಲ್ಲಿ ನಾಗಾ ಸಾಧುಗಳು ಮೊದಲು ಸ್ನಾನ ಮಾಡುತ್ತಾರೆ. ಮಹಾಕುಂಭದಲ್ಲಿ ಸ್ನಾನ ಮಾಡಿದ ನಂತರ ವ್ಯಕ್ತಿಯ ಎಲ್ಲಾ ಪಾಪಗಳು ತೊಳೆದುಹೋಗುತ್ತವೆ ಎಂಬ ನಂಬಿಕೆ ಇದೆ. ಹಿಂದೂ ಗ್ರಂಥಗಳಲ್ಲಿ, ಕುಂಭಮೇಳವನ್ನು 'ಅಮರತ್ವದ ಜಾತ್ರೆ' ಎಂದು ಕರೆಯಲಾಗುತ್ತದೆ. ಅದಕ್ಕಾಗಿಯೇ ಕುಂಭಮೇಳದ ಸಮಯದಲ್ಲಿ ಲಕ್ಷಾಂತರ ಭಕ್ತರು ತಮ್ಮ ಆತ್ಮವನ್ನು ಶುದ್ಧೀಕರಿಸಲು ಈ ಪವಿತ್ರ ಸ್ಥಳದಲ್ಲಿ ಸ್ನಾನ ಮಾಡಲು ಬರುತ್ತಾರೆ, ಪ್ರಪಂಚದಾದ್ಯಂತ ಇರುವ ಸಂತರು ಮತ್ತು ಭಕ್ತರಲ್ಲಿ ಕುಂಭಮೇಳದಲ್ಲಿ ಅಮೃತ ಸ್ನಾನಕ್ಕೆ ವಿಶೇಷ ಮಹತ್ವವಿದೆ. ಹರಿದ್ವಾರ, ಉಜ್ಜೈನಿ, ಪ್ರಯಾಗರಾಜ್ ಮತ್ತು ನಾಸಿಕ್‌ನಲ್ಲಿ ಪ್ರತಿ 3 ವರ್ಷಗಳಿಗೊಮ್ಮೆ ನಡೆಯುವ ಜಾತ್ರೆಯನ್ನು ಕುಂಭ ಎಂದು ಕರೆಯಲಾಗುತ್ತದೆ. ಮತ್ತೊಂದೆಡೆ, ಹರಿದ್ವಾರ ಮತ್ತು ಪ್ರಯಾಗರಾಜ್‌ನಲ್ಲಿ ಪ್ರತಿ 6 ವರ್ಷಗಳಿಗೊಮ್ಮೆ ನಡೆಯುವ ಕುಂಭವನ್ನು ಅರ್ಧ ಕುಂಭ ಎಂದು ಕರೆಯಲಾಗುತ್ತದೆ. ಅದೇ ಸಮಯದಲ್ಲಿ, ಪ್ರಯಾಗರಾಜ್‌ನಲ್ಲಿ ಪ್ರತಿ 12 ವರ್ಷಗಳಿಗೊಮ್ಮೆ ನಡೆಯುವ ಕುಂಭವನ್ನು ಪೂರ್ಣ ಕುಂಭಮೇಳ ಎಂದು ಕರೆಯಲಾಗುತ್ತದೆ. ಇದಲ್ಲದೇ ಪ್ರಯಾಗರಾಜ್‌ನಲ್ಲಿ 144 ವರ್ಷಗಳಿಗೊಮ್ಮೆ ನಡೆಯುವ ಕುಂಭಮೇಳವನ್ನು ಮಹಾಕುಂಭಮೇಳವೆಂದು ಕರೆಯಲಾಗುತ್ತದೆ. ಹಿಂದೂ ಧಾರ್ಮಿಕ ನಂಬಿಕೆಗಳ ಪ್ರಕಾರ ಪ್ರತೀ 144 ವರ್ಷಗಳಿಗೊಮ್ಮೆ ಪ್ರಯಾಗರಾಜ್‌ನಲ್ಲಿ ಮಹಾಕುಂಭವನ್ನು ಆಯೋಜಿಸಲಾಗುತದೆ. 144 ಹೇಗೆ? 12 ರಿಂದ 12ನ್ನು ಗುಣಿಸಿದಾಗ 144 ಆಗುತ್ತದೆ. ವಾಸ್ತವವಾಗಿ, ಕುಂಭ ಕೂಡ ಹನ್ನೆರಡು. ಅದರಲ್ಲಿ ನಾಲ್ಕು ಭೂಮಿಯಲ್ಲಿವೆ, ಉಳಿದ ಎಂಟು ಸ್ವರ್ಗದಲ್ಲಿವೆ ಎನ್ನುವ ನಂಬಿಕೆಯಿದೆ. ಆದ್ದರಿಂದ ಪ್ರತಿ 144 ವರ್ಷಗಳಿಗೊಮ್ಮೆ ಮಹಾಕುಂಭವನ್ನು ಪ್ರಯಾಗರಾಜ್‌ನಲ್ಲಿ ಆಯೋಜಿಸಲಾಗುತ್ತದೆ. ಮಹಾಕುಂಭದ ಮಹತ್ವವನ್ನು ಇತರ ಕುಂಭಗಳಿಗಿಂತ ಹೆಚ್ಚು ಎಂದು ಪರಿಗಣಿಸಲಾಗುತ್ತದೆ.

### ಕುಂಭಮೇಳದ ಇತಿಹಾಸ

ಕೆಲ ಮೂಲಗಳ ಪ್ರಕಾರ ಕುಂಭಮೇಳವನ್ನು ಆಯೋಜಿಸಿದ ಇತಿಹಾಸವು 850 ವರ್ಷಗಳಿಗಿಂತಲೂ ಹಳೆಯದು ಎಂದು ಹೇಳಲಾಗುತ್ತದೆ. ಇದನ್ನು ಆದಿಶಂಕರರು ಪ್ರಾರಂಭಿಸಿದರು. ಹಾಗಯೇ ಸಮುದ್ರ ಮಥನದ ಕಥೆಯ ಪ್ರಾರಂಭದಿಂದಲೂ ಕುಂಭವನ್ನು ಆಯೋಜಿಸಲಾಗಿದೆ ಎಂದು ಕೆಲವು ಕಥೆಗಳಲ್ಲಿ ಹೇಳಲಾಗಿದೆ. ಕೆಲವು ವಿದ್ವಾಂಸರು ಇದು ಗುಪ್ತ ಕಾಲದ ಆರಂಭ ಎಂದು ನಂಬುತ್ತಾರೆ. ಆದರೆ ಹರ್ಷವರ್ಧನ ಚಕ್ರವರ್ತಿಯ ಆಳ್ವಿಕೆ ಕಾಲದಿಂದಲೂ



ಪುರಾವೆಗಳು ಲಭ್ಯವಿದೆ. ಪುರಾಣ ಕಥನಗಳ ಪ್ರಕಾರ, ದೇವರುಗಳು ಮತ್ತು ಅಸುರರು ಒಟ್ಟಾಗಿ ಸಮುದ್ರವನ್ನು ಮಥಿಸಿದರು. ಈ ಮಥನದ ಸಮಯದಲ್ಲಿ ಅನೇಕ ರತ್ನಗಳು, ಅಪ್ಸರೆಯರು, ಪ್ರಾಣಿಗಳು, ವಿಷ ಮತ್ತು ಅಮೃತ ಸೇರಿದಂತೆ ಇತ್ಯಾದಿ ವಸ್ತುಗಳು ಹೊರಬಂದವು. ದೇವರುಗಳು ಮತ್ತು ಅಸುರರ ನಡುವಿನ ಸಂಘರ್ಷವು ಅಮೃತದಿಂದ ಪ್ರಾರಂಭವಾಯಿತು. ಈ ಹೋರಾಟದ ಮಧ್ಯೆ, ಕೆಲವು ಹನಿ ಅಮೃತವು ಭೂಮಿಯ ಮೇಲೆ ಬಿದ್ದಿತು. ಅಮೃತದ ಹನಿಗಳು ಯಾವೆಲ್ಲ ಸ್ಥಳಗಳಲ್ಲಿ ಬಿದ್ದವೋ ಅಲ್ಲಿ ಕುಂಭಮೇಳವನ್ನು ಆಯೋಜಿಸಲಾಗಿತ್ತು. ಪ್ರಯಾಗ್, ಹರಿದ್ವಾರ, ನಾಸಿಕ್ ಮತ್ತು ಉಜ್ಜಯಿನಿಗಳಲ್ಲಿ ಅಮೃತದ ಹನಿಗಳು ಬಿದ್ದಿದ್ದವು. ಇನ್ನು ಅಮೃತವನ್ನು ಎಳೆಯುವ ಸಂದರ್ಭದಲ್ಲಿ ಚಂದ್ರನು ಅಮೃತವನ್ನು ಇತರೆಡೆಗೆ ಹರಿಯದಂತೆ ಉಳಿಸಿದ್ದನಂತೆ. ಆ ನಂತರ ಗುರು ಬೃಹಸ್ಪತಿ ದೇವನು ಚಿತಾಭಸ್ಮವನ್ನು ಒಂದೆಡೆ ಯಾರಿಗೂ ಕಾಣದಂತೆ ಎತ್ತಿಟ್ಟಿದ್ದ, ಸೂರ್ಯದೇವ ಕಲಶ ಸ್ಫೋಟಿಸದಂತೆ ರಕ್ಷಿಸಿದನು ಮತ್ತು ಶನಿದೇವ ಇಂದ್ರನ ಕೋಪವನ್ನು ನಿಯಂತ್ರಿಸಿದನು. ಆದ್ದರಿಂದ, ಈ ಗ್ರಹಗಳ ಸಂಯೋಜನೆಯು ಒಂದು ರಾಶಿಚಕ್ರದಲ್ಲಿದ್ದಾಗ ಮಹಾಕುಂಭವನ್ನು ಆಯೋಜಿಸಲಾಗುತ್ತದೆ. ಏಕೆಂದರೆ ಅಮೃತ ಕಲಶವು ಈ ಗ್ರಹಗಳ ಸಂಯೋಜನೆಯಿಂದ ರಕ್ಷಿಸಲ್ಪಟ್ಟಿತು ತದನಂತರ ದೇವರುಗಳು ವಿಷ್ಣುವಿನ ಸಹಾಯದಿಂದ ಅಮೃತವನ್ನು ಸೇವಿಸಿದರೆಂಬ ನಂಬಿಕೆಯುಂಟು. ಇನ್ನು ವೈದಿಕ ಜ್ಯೋತಿಷ್ಯದ ಪ್ರಕಾರ, ಬೃಹಸ್ಪತಿ ಅಥವಾ ಗುರುವು ಒಂದೇ ರಾಶಿಯಲ್ಲಿ ಸುಮಾರು ಒಂದು ವರ್ಷಗಳ ಕಾಲ ವಾಸಿಸುತ್ತಾರೆ ಮತ್ತು ಇನ್ನೊಂದು ರಾಶಿಚಕ್ರವನ್ನು ಪ್ರಯಾಣಿಸಲು ಅವರಿಗೆ 12 ವರ್ಷಗಳು ಬೇಕಾಗುತ್ತದೆ. ಆದ್ದರಿಂದ 12 ವರ್ಷಗಳ ನಂತರ ಈ ಪವಿತ್ರ ಸ್ಥಳಗಳಲ್ಲಿ ಕುಂಭಮೇಳವನ್ನು ಆಯೋಜಿಸಲಾಗಿದೆ. ಪ್ರತಿ ಮೂರು ವರ್ಷಗಳಿಗೊಮ್ಮೆ ಕುಂಭಕ್ಕೆ ನಿಗದಿಯಾದ ವಿವಿಧ ಸ್ಥಳಗಳಲ್ಲಿ ಜಾತ್ರೆ ನಡೆಯುತ್ತದೆ. ಗುರುವು ಕುಂಭರಾಶಿಯಲ್ಲಿದ್ದಾಗ ಮತ್ತು ಸೂರ್ಯ ಮೇಷ ರಾಶಿಯಲ್ಲಿದ್ದಾಗ, ಕುಂಭ ಮೇಳದ ಸಂಘಟನೆ ಪ್ರಾರಂಭವಾಗುತ್ತದೆ.

### ಶಾಹಿ ಸ್ನಾನದ ಮಹತ್ವ

ಮಹಾಕುಂಭ ಮೇಳವು ಜಗತ್ತಿನ ಅತಿದೊಡ್ಡ ಸಾರ್ವಜನಿಕ ಸಮಾರಂಭ ಎಂದು ಖ್ಯಾತಿ ಪಡೆದಿದೆ. ಇದರಲ್ಲಿ ಶಾಹಿ ಸ್ನಾನವು ಪ್ರಮುಖವಾಗಿದೆ. ಕಾಶಿಯ ಪೀಠಾಧಿಪತಿಗಳು, ಸಂತರು, ಸನ್ಯಾಸಿಗಳು ತಮ್ಮ ಅನುಯಾಯಿಗಳೊಂದಿಗೆ ಪೂರ್ವಕಾಲದ ಸಾಂಸ್ಕೃತಿಕ ರೀತಿ–ನೀತಿಗಳನ್ನು ಪಾಲಿಸುತ್ತಾ ಪವಿತ್ರ ಸ್ನಾನವನ್ನು ಮಾಡುತ್ತಾರೆ.  ಮಹಾಕುಂಭದ ಸಮಯದಲ್ಲಿ ಕೆಲವು ಪ್ರಮುಖ ದಿನಾಂಕಗಳಿವೆ. ಅವು ಧಾರ್ಮಿಕ ದೃಷ್ಟಿಕೋನದಿಂದ ವಿಶೇಷ ಪ್ರಾಮುಖ್ಯತೆಯನ್ನು ಹೊಂದಿವೆ. ಈ ಪ್ರಮುಖ ದಿನಾಂಕಗಳಲ್ಲಿ ವಿವಿಧ ಋಷಿಗಳು ಮತ್ತು ಸಂತರು ತಮ್ಮ ಶಿಷ್ಯರೊಂದಿಗೆ ಭವ್ಯವಾದ ಮೆರವಣಿಗೆಗಳನ್ನು ನಡೆಸುತ್ತಾರೆ. ಅವರು ಕುಂಭಮೇಳದ ಆರಂಭವನ್ನು ಸೂಚಿಸುವ 'ಶಾಹಿ ಸ್ನಾನ' ಎಂದೂ ಕರೆಯಲ್ಪಡುವ ಭವ್ಯವಾದ ಆಚರಣೆಯಲ್ಲಿ ಭಾಗವಹಿಸುತ್ತಾರೆ. ಶಾಹಿ ಸ್ನಾನ ಈ ಮಹಾಕುಂಭಮೇಳದ ಪ್ರಮುಖ ಆಕರ್ಷಣೆಯಾಗಿದ್ದು, ಇದಕ್ಕಾಗಿ ವಿಶೇಷ ವ್ಯವಸ್ಥೆಗಳನ್ನು ಮಾಡಲಾಗಿದೆ. ಶಾಹಿ ಸ್ನಾನದ ಸಂದರ್ಭದಲ್ಲಿ ಜನರು ಶಾಹಿ ಸ್ನಾನವನ್ನು ತೆಗೆದುಕೊಳ್ಳುವ ಸಂತರ ಆಶೀರ್ವಾದ ಪಡೆಯುತ್ತಾರೆ.

### ಮಹಾಕುಂಭದ ಮಹಾ ಆಯೋಜನೆ

ಭಾರತದ ಪುರಾತನ ಸಾಂಸ್ಕೃತಿಕ, ಧಾರ್ಮಿಕ ಸಂಪ್ರದಾಯಗಳನ್ನು ಮಹಾಕುಂಭ ಮೇಳ ಜಾಗತಿಕ ಮಟ್ಟಕ್ಕೆ ಕೊಂಡೊಯ್ಯಲಿದೆ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಇತ್ತೀಚೆಗೆ ಪ್ರಯಾಗ್ ರಾಜ್‌ಗೆ ಭೇಟಿ ನೀಡಿದ ಸಂದರ್ಭದಲ್ಲಿ ಹೇಳಿದ್ದರು. ತಮ್ಮ ಪುರಾತನ ಸಂಪ್ರದಾಯಗಳು ಹಾಗೂ ಸಾಂಸ್ಕೃತಿಕ ಬೇರುಗಳ ಜೊತೆಗೆ ಮರು ಸಂಬಂಧ ಬೆಳೆಸಲು ಮಹಾಕುಂಭ ಮೇಳ ಜಗತ್ತಿನಾದ್ಯಂತದ ಜನರಿಗೆ ಅವಕಾಶ ಮಾಡಿಕೊಡುತ್ತದೆ. ಈ ಸಾಲಿನ ಮಹಾಕುಂಭ ಅದ್ದೂರಿತನ, ದೈವಿಕತೆ ಮತ್ತು ಅತ್ಯಾಧುನಿಕ ಡಿಜಿಟಲ್ ತಂತ್ರಜ್ಞಾನದ ಬಳಕೆಯಲ್ಲಿ ಮೇಳೈಸಿದೆ. ಇದು ವಿಶ್ವದ ಅತಿ ದೊಡ್ಡ ಧಾರ್ಮಿಕ ಕಾರ್ಯಕ್ರಮ ಆಗಿರುವುದರಿಂದ ಮೇಳಕ್ಕೆ ಆಗಮಿಸುವ ಭಕ್ತರಿಗಾಗಿ ವಿವಿಧ ಕಾರ್ಯಕ್ರಮಗಳ ವಿವರ ತಿಳಿಯಲು ಸರಿಸುಮಾರು 50 ಸಾವಿರ QR ಕೋಡ್‌ಗಳ ರಚನೆ ಮಾಡಲಾಗಿದೆ.  ಇನ್ನು 24 ಗಂಟೆಗಳ ಕಾಲ ನೀರೊಳಗಿನಿಂದ ಡ್ರೋಣ್‌ಗಳಿಂದ ನಿರಂತರ ಕಣ್ಗಾವಲು ಪಿಎಸಿ, ಎನ್‌ಡಿಆರ್‌ಎಫ್, ಎಟಿಎಸ್, ಎನ್‌ಎಸ್‌ಜಿ ಸೇರಿ 45 ಸಾವಿರಕ್ಕೂ ಅಧಿಕ ಭದ್ರತಾ ಸಿಬ್ಬಂದಿಯ ನಿಯೋಜನೆ ಸೇರಿದಂತೆ 3,000ಕ್ಕೂ ಹೆಚ್ಚು ಕ್ಯಾಮೆರಾಗಳ ಅಳವಡಿಕೆ ನೋಡಿದರೆ ಉತ್ತರಪ್ರದೇಶ ಸರ್ಕಾರವು ಸುಸಜ್ಜಿತ ಭದ್ರತೆಗೆ ಒತ್ತು ನೀಡಿರುವುದು ಕಂಡುಬರುತ್ತದೆ. 1.5 ಲಕ್ಷಕ್ಕೂ ಹೆಚ್ಚು ಶೌಚಾಲಯಗಳ ನಿರ್ಮಾಣ, ಭದ್ರತೆಯಲ್ಲಿ ಕೃತಕ ಬುದ್ಧಿಮತ್ತೆ ಕ್ಯಾಮೆರಾಗಳ (AI) ಪರಿಣಾಮಕಾರಿ ಬಳಕೆ, ಸಂಗಮದಲ್ಲಿ ಭಕ್ತರ ಓಡಾಟಕ್ಕೆ 30 ಪಾಂಟೂನ್ ಸೇತುವೆಗಳ ನಿರ್ಮಾಣ, 10 ಸಾವಿರ ಎಕರೆ ಪ್ರದೇಶಗಳಲ್ಲಿ ಅಭೂತಪೂರ್ವ ವ್ಯವಸ್ಥೆಯಾಗಿದ್ದು, ವಿಶೇಷವಾಗಿ ಶುಚಿತ್ವ, ಭದ್ರತೆಗೆ ಪ್ರಾಶಸ್ತ್ಯ ನೀಡಿ ಆಧುನಿಕತೆಯನ್ನು ಅಳವಡಿಸಿಕೊಳ್ಳಲಾಗಿದೆ. ಶೌಚಾಲಯಗಳ ಶುಚಿತ್ವವನ್ನು ನಿರ್ವಹಿಸಲು ಭಕ್ತರ ಅನುಕೂಲಕ್ಕಾಗಿ ಡಿಜಿಟಲ್ ಟೂರಿಸಂ ಮ್ಯಾಪ್ ಇದೆ. ಸ್ಮಾರ್ಟ್‌ಫೋನ್‌ಗಳ ಮೂಲಕ ಕೃತಕ ಬುದ್ಧಿಮತ್ತೆ ಆಧಾರಿತ ಭದ್ರತಾ ವ್ಯವಸ್ಥೆಯನ್ನು ಸಂಯೋಜಿಸಲಾಗಿದೆ ಎಂದು ಸಿಎಂ ಯೋಗಿ ಹೇಳಿರುವರು. ಅದೇ ರೀತಿ ಮಹಾಕುಂಭ ಕೇವಲ ಧಾರ್ಮಿಕ ಕಾರ್ಯಕ್ರಮವಲ್ಲ, ಇದು ಸಾಮಾಜಿಕ ಮತ್ತು ಆಧ್ಯಾತ್ಮಿಕ ಒಗ್ಗಟ್ಟಿನ ಸಂಕೇತ ಎಂದೂ ಅವರು ಬಣ್ಣಿಸಿದ್ದಾರೆ. ಈ ಕಾರ್ಯಕ್ರಮವು ಪ್ರಯಾಗ್‌ರಾಜ್ ಅನ್ನು ವಿಶ್ವದ ಅತಿ ದೊಡ್ಡ ತಾತ್ಕಾಲಿಕ ನಗರವನ್ನಾಗಿಯೂ ಮಾರ್ಪಡಿಸಲಿದೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

### ರಾಷ್ಟ್ರದ ಏಕತೆಗೆ ಬುನಾದಿ

ಇನ್ನು 21ನೇ ಶತಮಾನದಲ್ಲಿ ಬದಲಾಗುತ್ತಿರುವ ಸನ್ನಿವೇಶದಲ್ಲಿ ಭರತವರ್ಷದ ಆಧ್ಯಾತ್ಮಿಕ ಐಕ್ಯರೂಪವಾಗಿ ಮಹಾಕುಂಭವನ್ನು ಪರಿಗಣಿಸಬೇಕಾಗಿದೆ. ಎಲ್ಲ ಜಾತಿ, ಧರ್ಮ, ಸಂಪ್ರದಾಯ ಮತ್ತು ಪಂಥಗಳ ಭೇದವನ್ನು ಮರೆತು ರಾಷ್ಟ್ರದ ಆಧ್ಯಾತ್ಮಿಕ ಉತ್ಥಾನಕ್ಕೆ ಬುನಾದಿಯಂತಿರುವ ಈ ಪುಣ್ಯಮೇಳವನ್ನು ಪ್ರತಿಯೊಬ್ಬ ನಾಗರಿಕನೂ ಕೂಡ ಸ್ವಾಗತಿಸಬೇಕು. 2024ರ ಜನವರಿ 22ರಂದು ಅಯೋಧ್ಯೆಯಲ್ಲಿ ಶ್ರೀರಾಮನ ಪ್ರಾಣ ಪ್ರತಿಷ್ಠೆಯ ನಂತರದಲ್ಲಿ ನಡೆಯುತ್ತಿರುವ ಮೊದಲ ಕುಂಭ ಮೇಳ ಇದಾಗಿದ್ದು ಸರ್ವರಿಗೂ ಶುಭವನ್ನುಂಟುಮಾಡಲಿ.

■ **ಸೋಮೇಶ್ವರ ಗುರುಮಠ,** ಸಂಶೋಧನಾ ವಿದ್ಯಾರ್ಥಿ, ಮಣಿಪಾಲ

■

## ಸಂಸ್ಮರಣೆ

# ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ

ಕನ್ನಡದ ರಾಷ್ಟ್ರಕವಿಗಳಲ್ಲೊಬ್ಬರು, ಜಿ.ಎಸ್.ಎಸ್. ಎಂದೇ ಗುರುತಿಸಿಕೊಂಡವರು ಜಿ.ಎಸ್. ಶಿವರುದ್ರಪ್ಪ ಅವರು. ವಿಮರ್ಶಕರಾಗಿ, ಕವಿಗಳಾಗಿ ಆಧುನಿಕ ಕನ್ನಡ ಸಾಹಿತ್ಯಕ್ಕೆ ಅವರು ನೀಡಿದ ಕೊಡುಗೆ ಅಪಾರ.

**ಪರಿಚಯ:** ಕವಿ ಜಿ.ಎಸ್. ಶಿವರುದ್ರಪ್ಪ ಅವರು ಫೆಬ್ರವರಿ 7, 1926 ರಂದು ಶಿವಮೊಗ್ಗ ಜಿಲ್ಲೆಯ, ಶಿಕಾರಿಪುರ ತಾಲ್ಲೂಕಿನ ಈಸೂರು ಗ್ರಾಮದಲ್ಲಿ ಜನಿಸಿದರು. ಅವರ ಪೂರ್ಣ ಹೆಸರು ಗುಗ್ಗರಿ ಶಾಂತವೀರ ಶಿವರುದ್ರಪ್ಪ. ಅವರ ತಂದೆ ಶಾಂತವೀರಪ್ಪ, ತಾಯಿ ವೀರಮ್ಮ. ಅವರು ಶಿಕಾರಿಪುರದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಪಡೆದರು. ನಂತರ ಎಂ.ಎ. ಪದವಿ ಮುಗಿಸಿದರು. ದಾವಣಗೆರೆಯ ಡಿ.ಆರ್. ಎಮ್. ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿದ್ದ ಅವರು ಕುವೆಂಪು ಅವರ ವಿದ್ಯಾರ್ಥಿ ಮತ್ತು ಅನುಯಾಯಿಯಾಗಿದ್ದು, ಕುವೆಂಪು ಅವರ ಸಾಹಿತ್ಯ ಕೃತಿಗಳಿಂದ ಹೆಚ್ಚು ಪ್ರೇರಿತರಾಗಿದ್ದರು.

**ವೃತ್ತಿ:** ಜಿ.ಎಸ್. ಶಿವರುದ್ರಪ್ಪ ಅವರು 1966ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ನಂತರ ಅವರು ವಿಶ್ವವಿದ್ಯಾನಿಲಯದ ನಿರ್ದೇಶಕರಾಗಿ ಆಯ್ಕೆಯಾದರು. ದಾವಣಗೆರೆ, ಶಿವಮೊಗ್ಗ, ಮೈಸೂರು ಮುಂತಾದ ಕಡೆ ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದರು. 1986ರಲ್ಲಿ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಸೇವೆಯಿಂದ ನಿವೃತ್ತರಾದರು. 1987–90ರ ಅವಧಿಯಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದರು.

**ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆ:** ಪ್ರಾಚೀನ ಕನ್ನಡ ಸಾಹಿತ್ಯವನ್ನು ಸಂಧಾನ ಮಾಡಿದ ವಿದ್ವಾಂಸರ ತಂಡದಲ್ಲಿ ಜಿ.ಎಸ್.ಎಸ್. ಪ್ರಮುಖರಾಗಿದ್ದರು. ಆಧುನಿಕ ಸಮಾಜದಲ್ಲಿ ಅವುಗಳನ್ನು ಪ್ರಸ್ತುತಪಡಿಸಲು ಯಶಸ್ವಿ ಪ್ರಯತ್ನ ಮಾಡಿದ್ದಾರೆ. ಇವರ ಸಂಪಾದಕತ್ವದಲ್ಲಿ "ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ" ಆರು ಸಂಪುಟಗಳಲ್ಲಿ ಪ್ರಕಟಗೊಂಡಿರುವುದು ಕನ್ನಡ ಸಾಹಿತ್ಯ ಚರಿತ್ರೆಗೆ ಮಹತ್ವದ ಕೊಡುಗೆಯಾಗಿದೆ.



**ಕೃತಿಗಳು:** ಸಾಮಗಾನ, ಚೆಲುವು–ಒಲವು, ದೇವಶಿಲ್ಪ, ದೀಪದ ಹೆಜ್ಜೆ, ಕಾರ್ತಿಕ, ಚಕ್ರಗತಿ, ಅನಾವರಣ, ತೆರೆದ ದಾರಿ, ಪ್ರೀತಿ ಇಲ್ಲದ ಮೇಲೆ, ಕಾಡಿನ ಕತ್ತಲಲ್ಲಿ, ಜಾರಿದ ಹೂವು, ಎದೆ ತುಂಬಿ ಹಾಡಿದೆನು ಸೇರಿದಂತೆ ಅನೇಕ ಕೃತಿಗಳು ಜಿ.ಎಸ್. ಶಿವರುದ್ರಪ್ಪ ಅವರು ರಚಿಸಿದ್ದಾರೆ.

**ರಾಷ್ಟ್ರಕವಿ:** 2006ರ ನವೆಂಬರ್ 1 ರಂದು ಕನ್ನಡ ರಾಜ್ಯೋತ್ಸವದ ದಿನದಂದು ಸುವರ್ಣ ಕರ್ನಾಟಕ ಸಮಯದಲ್ಲಿ ಸರ್ಕಾರ ಶಿವರುದ್ರಪ್ಪ ಅವರಿಗೆ 'ರಾಷ್ಟ್ರಕವಿ' ಎಂದು ಬಿರುದು ನೀಡಿ ಗೌರವಿಸಿದರು. ಜೊತೆಗೆ ಗೋವಿಂದ ಪೈ ಮತ್ತು ಕುವೆಂಪು ಅವರ ನಂತರ ಈ ಪ್ರತಿಷ್ಠಿತ ರಾಷ್ಟ್ರಕವಿ ಬಿರುದನ್ನು ಪಡೆದ ಮೂರನೇ ಕನ್ನಡದ ಕವಿ ಎಂಬ ಹೆಗ್ಗಳಿಕೆ ಪಾತ್ರರಾದರು.

**ಪ್ರಶಸ್ತಿ:** 1974ರಲ್ಲಿ ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ. 1982ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, 1984ರಲ್ಲಿ ಕರ್ನಾಟಕ ರಾಜ್ಯೋತ್ಸವ ಪುರಸ್ಕಾರ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1997ರಲ್ಲಿ ಪ್ರೊ. ಭೂಸನೂರ ಮಠ ಪ್ರಶಸ್ತಿ ಮತ್ತು ಗೊರೂರು ಪ್ರಶಸ್ತಿ, 1998ರಲ್ಲಿ ಪಂಪ ಪ್ರಶಸ್ತಿ. 2000ರಲ್ಲಿ ಮಾಸ್ತಿ ಪ್ರಶಸ್ತಿ, ನೃಪತುಂಗ ಪ್ರಶಸ್ತಿ ಲಭಿಸಿದೆ.

ಜಿ.ಎಸ್. ಶಿವರುದ್ರಪ್ಪ ಅವರು ಅನಾರೋಗ್ಯ ಸಮಸ್ಯೆಯಿಂದ ಡಿಸೆಂಬರ್ 23, 2013ರಂದು ವಿಧಿವಶರಾದರು.

## ಪುಸ್ತಕ ಪರಿಚಯ

### ವಿಜಯೀ ಮಹಾರಾಜಾಧಿರಾಜ

**ಲೇಖಕರು:** ಕಾ.ಶ್ರೀ. ನಾಗರಾಜ
**ಪ್ರಕಾಶನ :** ಶ್ರೀ ಎ. ರವಿ ಜೋಷಿ
**ಬೆಲೆ :** ರೂ.450

ಶಿವಾಜಿಯ ಜೀವನಗಾಥೆ ಮತ್ತು ಹಿಂದೂ ವೀರರ ಶತ್ರುದಮನದ ರೋಚಕ ಗ್ರಂಥ ವಿಜಯೀ ಮಹಾರಾಜಾಧಿರಾಜ ಶಿವಾಜಿ, ಆತ ಒಂದು ಮಹಾವಿಸ್ಮಯ! ತೀರ ಸಾಮಾನ್ಯನೊಬ್ಬನು ಛತ್ರಪತಿಯಾದ ವಾಸ್ತವ! ನರಸಿಂಹ ಅವತಾರ ತಾಳಿ ದೈತ್ಯರೂಪಿಯನ್ನು ಧರಾಶಾಹಿಗೊಳಿಸಿದ ಸಾಹಸಿ! ನಚಿಕೇತನಂತೆ ಯಮನ ಹಸ್ತಲಾಘವ ಮಾಡಿಯೂ ಜೀವಂತ ಬದುಕಿಬಂದ ಧೀರಾತ್ಮ! ನಾಲ್ಕಾರು ಅಡಿಯಷ್ಟು ಸ್ವಂತ ನೆಲದ ಅಭಾವದ ಹಿನ್ನೆಲೆಯಲ್ಲೂ ಸಮರ್ಥ ನಾಡೊಂದನ್ನು ಕಟ್ಟಿದ ಯಶಸ್ವೀ ಹೋರಾಟಗಾರ! ಸ್ವತಂತ್ರ ಭಾರತದ ಭವ್ಯ ಭವಿಷ್ಯ ಆತನ ನೀತಿ ಚತುರತೆಯದೇ ಛಾಪು!




ಮನೆಮನೆಗಳಲ್ಲೂ ಶಿವಾಜಿಯ ಪುನರ್ಜನ್ಮ ಸಂಭವಿಸುವ ವಿಶ್ವಾಸದ ಚಿಹ್ನೆಗಳು ಪತ್ಯಕ್ಷಗೊಳ್ಳುತ್ತಿದೆ. ನಾಡಿನ ಹೀನಾಯ ಸ್ಥಿತಿಯಲ್ಲೂ ಖಡ್ಗಬಲದಿಂದ ದೈತ್ಯರನ್ನು ಮೆಟ್ಟಿನಿಂತ ಧರ್ಮರಾಜ್ಯಸ್ಥಾಪಕ ಎಂದರೆ ಶಿವಾಜಿಯೇ. ವಿಜಯ, ಯಶಸ್ಸು, ಭವ್ಯತೆಗಳೆಲ್ಲವೂ ಶಿವಾಜಿಯ ಹೆಸರಿನಲ್ಲೇ ಸಂಪನ್ನಗೊಂಡಿವೆ. ಆತ್ಮನಿರ್ಭರ ಭಾರತದ ಹುಟ್ಟು ಶಿವಾಜಿಯದೇ ಮೂಲ ಚಿಂತನೆ. ಇಂತಹ ಅನೇಕ ಸಂಗತಿಗಳನ್ನೊಳಗೊಂಡ ಪುಸ್ತಕ ವಿಜಯೀ ಮಹಾರಾಜಾಧಿರಾಜ.

ಪುಸ್ತಕಕ್ಕಾಗಿ ಸಂಪರ್ಕಿಸಿ: 63605 81957

# ಸಂಸ್ಕಾರವನ್ನು ನೀಡುತ್ತಿರುವ ಸೇವಾಭಾರತಿಯ ಸೇವಾಪ್ರಕಲ್ಪ

ದೆಹಲಿಯ ಕಲಂದರ್ ಕಾಲೊನಿಯ ಮಸ್ತ್ ಕಲಂದರ್‌ನೇ ಆಗಿದ್ದ ಹುಡುಗ – ಶಕೀಲ್. ದಿನವಿಡೀ ಉಪದ್ರವಿಯಾಗಿ, ಜಗಿತ ನೆಗೆತ ಮತ್ತು ಅಲೆಮಾರಿತನದಲ್ಲಿ ಮಾತ್ರ ಅವನ ಮನಸ್ಸು ವಿಹರಿಸುತ್ತಿತ್ತು. ಮನೆಯ ಹಿರಿಯರ ಎಲ್ಲಾ ಪ್ರಯತ್ನಗಳ ಹೊರತಾಗಿಯೂ, ಅಧ್ಯಯನ ಮತ್ತು ಶಾಲೆ ಅವನ ಆವರಣದ ಹೊರಗಿತ್ತು. ಗುರ್ಬತ್‌ನಲ್ಲಿ ವಾಸಿಸುತ್ತಿರುವ ಅವನ ಪರಿಶ್ರಮಿ ತಂದೆ–ತಾಯಿ ಮುಂದೆ ಶಕೀಲ್ ತನ್ನ ವಿದ್ಯಾಭ್ಯಾಸ ಮುಗಿಸಿ ತಮ್ಮ ವೃದ್ಧಾಪ್ಯದಲ್ಲಿ ಸಹಾಯಕವಾಗಬಹುದೆಂದು ಬಯಸಿದ್ದರು. ಆದರೆ ಈಗ ಅವರಿಗೆ ಅವನ ರೀತಿ ನೀತಿ ನೋಡಿ ತಮ್ಮ ನಿರೀಕ್ಷೆಗಳಿಗೆ ತಣ್ಣೀರೆರಚುತ್ತಿದ್ದಂತೆ ಕಂಡುಬರುತ್ತಿದ್ದ.

ಆಗ ನಡೆದ ಒಂದು ಘಟನೆ. ಚೂರು ಚೂರಾಗುತ್ತಿದ್ದ ಅವರ ನಿರೀಕ್ಷೆಗಳು ಹೊಸ ಬೆಳಕಿನ ಕಿರಣವನ್ನು ಪಡೆದವು. ಬೀದಿಬದಿಯ ಅಲೆಮಾರಿ ಮಕ್ಕಳ ಪ್ರಕಲ್ಪಕ್ಕೆ ಸಂಬಂಧಿಸಿದ ಸೇವಾ ಭಾರತಿಯ ಕಾರ್ಯಕರ್ತರು ಅವರ ಸೇವಾಬಸ್ತಿಗೆ ಆಗಮಿಸಿದಾಗ ಅವರ ದೃಷ್ಟಿ ಶಕೀಲ್ ಮೇಲೆ ಬಿತ್ತು. ತಂಡವು ಶಕೀಲ್ ಅವರ ಮನೆಗೆ ಬಂದು ಅವನನ್ನು ಸಂಸ್ಕಾರವಂತನಾಗಿ ಮಾಡುವ ಹಾಗೂ ಇತರ ತರಬೇತಿಗಳ ಬಗ್ಗೆ ಮಾತನಾಡಿದಾಗ, ಶಕೀಲ್ ಅವರ ತಂದೆ ತಕ್ಷಣ ಒಪ್ಪಿದರು. ಶಕೀಲ್ ಸಂಸ್ಕಾರ ಕೇಂದ್ರಕ್ಕೆ ಹೋಗಲು ಪ್ರಾರಂಭಿಸಿದನು ಮತ್ತು ನೋಡನೋಡುತ್ತಿದ್ದಂತೆ ಅವನು ವಿದ್ಯುತ್ ಕೆಲಸವನ್ನು ಕರಗತ ಮಾಡಿಕೊಂಡನು. ಸ್ವಯಂಸೇವಕರೊಂದಿಗೆ ಸಂಪರ್ಕಕ್ಕೆ ಬಂದ ನಂತರ, ಅವನಲ್ಲಿ ಸಂಸ್ಕಾರದ ಬೀಜಗಳು ಎಷ್ಟರಮಟ್ಟಿಗೆ ಮೊಳಕೆಯೊಡೆದವೆಂದರೆ, ಅವನು ಅವನಿಗೆ ತಿಳಿಯದಂತೆ ತನ್ನ ತಂದೆ ಮತ್ತು ತಾಯಿಗೆ ವಿಧೇಯನಾಗಿಬಿಟ್ಟಿದ್ದ. ಇಂದು ಸೇವಾಬಸ್ತಿಯಲ್ಲಿರುವ ಪ್ರತಿಯೊಬ್ಬರಿಗೂ ಶಕೀಲ್ ಮಾಡುವ ಎಲೆಕ್ಟ್ರೀಷಿಯನ್ ಕೆಲಸದ ಬಗ್ಗೆ ಮನವರಿಕೆಯಾಗಿದೆ. ಈಗ ಅವನು ಚೆನ್ನಾಗಿ ಹಣವನ್ನು ಸಂಪಾದಿಸುತ್ತಿದ್ದಾನೆ ಮತ್ತು ಅವನ ಹೆತ್ತವರು ತುಂಬಾ ಸಂತೋಷವಾಗಿದ್ದಾರೆ.

ಅಲೆಮಾರಿ ಮತ್ತು ಉಪೇಕ್ಷಿತ ಮಕ್ಕಳಿಗಾಗಿ 1994ರಲ್ಲಿ ಸೇವಾಭಾರತಿ ಪ್ರಾರಂಭಿಸಿದ ಅಲೆಮಾರಿ ಮಕ್ಕಳ ಪ್ರಕಲ್ಪದ ಮೂಲಕ, ಇಲ್ಲಿಯವರೆಗೆ ಶಕೀಲ್‌ರಂತಹ ಸಾವಿರಾರು ಹದಿಹರೆಯದವರ ಜೀವನಕ್ಕೆ ಹೊಸ ದಿಕ್ಕು ದೊರೆತಿದೆ. ಇದಕ್ಕೆ ಇನ್ನೊಂದು ನಿದರ್ಶನ ರಾಜು ದುಬೆ ದಿಲ್ ಶಹಾ ವಿಹಾರದ ರಾಜು ದುಬೆ ಹದಿಹರೆಯದವನು. ಈ ಪ್ರದೇಶದಲ್ಲಿ ನಡೆಯುತ್ತಿರುವ ಕೇಂದ್ರಕ್ಕೆ ಹೋಗಲು ಪ್ರಾರಂಭಿಸಿದನು ಮತ್ತು ಪೂರ್ಣ ಆಸಕ್ತಿಯಿಂದ ಕಂಪ್ಯೂಟರ್ ತರಬೇತಿ ಪಡೆದನು. ಇಂದು, ಈ ಉತ್ಸಾಹಿ ಯುವಕ ಬಿ.ಕಾಂ. ಅಧ್ಯಯನ ಮಾಡುವುದರ ಜೊತೆಗೆ ಪ್ರೊಜೆಕ್ಟರ್ ಗುತ್ತಿಗೆದಾರನಾಗಿ ಕೆಲಸ ಮಾಡುವ ಮೂಲಕ ಚೆನ್ನಾಗಿ ಸಂಪಾದಿಸಲು ಪ್ರಾರಂಭಿಸಿದ್ದಾನೆ. ಇದೇ ರೀತಿ ಅಲೆಮಾರಿ ಜೀವನವನ್ನು ತ್ಯಜಿಸಿದ ಸಂತೋಷನು ಕೇಂದ್ರದಲ್ಲಿ ಲಭಿಸಿದ ಸ್ವಾವಲಂಬನೆಯ ಪ್ರೇರಣೆಯಿಂದ ದೋಣಿ ಉದ್ಯಮದಲ್ಲಿ ಜೀವನವನ್ನು ಕಟ್ಟಿಕೊಂಡಿದ್ದಾನೆ.



ಸೇವಾಭಾವನೆಯ ವಿಚಾರದಿಂದ ಮೊಳಕೆಯೊಡೆದ ಈ ಪ್ರಕಲ್ಪವು ಸ್ವಯಂಸೇವಕರ ದಣಿವರಿಯದ ಪ್ರಯತ್ನದಿಂದ ಇಂದು ವಿಶಾಲ ವಟವೃಕ್ಷವಾಗಿದೆ. ಇದರ ನೆರಳಿನಿಂದ ಸಾವಿರಾರು ಕಿಶೋರರ ಜೀವನವು ಸಂಸ್ಕಾರದ ಸುಗಂಧದಿಂದ ಆವರಿಸಲ್ಪಟ್ಟಿದೆ. ಆರಂಭದಲ್ಲಿ ತೊಂದರೆಗಳಿದ್ದವು, ಆದರೆ ಮಕ್ಕಳಲ್ಲಿನ ಅದ್ಭುತ ಬದಲಾವಣೆಯನ್ನು ನೋಡಿ ಅನೇಕ ಕುಟುಂಬಗಳು ಸೇರಿಕೊಂಡವು. ಇಂದು ಈ ಪ್ರಕಲ್ಪದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಮಕ್ಕಳಿಗೆ ತರಬೇತಿ ನೀಡಲಾಗಿದೆ. ಅಲೆಮಾರಿ ಮತ್ತು ನಿರ್ಲಕ್ಷ್ಯಕ್ಕೊಳಗಾದ ಮಕ್ಕಳು ಶಿಕ್ಷಣ ಪಡೆಯುವವರೆಗೂ ದೇಶದ ಸರ್ವಾಂಗೀಣ ವಿಕಾಸದ ಕನಸು ಈಡೇರಲು ಸಾಧ್ಯವಿಲ್ಲ ಎಂದು ಸೇವಾಭಾರತಿ ದೆಹಲಿಯ ಹಿರಿಯ ಕಾರ್ಯಕರ್ತ ಜ್ಞಾನಪ್ರಕಾಶ್ ಹೇಳುತ್ತಾರೆ.

ಈ ಪ್ರಕಲ್ಪವು ದೆಹಲಿಯ ಸೇವಾಬಸ್ತಿಯ ಕಿರಿದಾದ ಗಲ್ಲಿಗಳಲ್ಲಿ ಎಷ್ಟೋ ಅಲೆಮಾರಿ ಯುವಕರನ್ನು ನಿಷ್ಪಯೋಜಕತನ, ಸೋಂಬೇರಿತನ ಮತ್ತು ಅಪರಾಧದ ಕಗ್ಗತ್ತಲೆಯಲ್ಲಿ ಕಳೆದುಹೋಗುವ ಮೊದಲು ಅವರ ಜೀವನದಲ್ಲಿ ಸ್ವಾವಲಂಬನೆಯ ಹೊಸಶಕ್ತಿಯನ್ನು ತುಂಬುತ್ತದೆ. ತರಬೇತಿಯೊಂದಿಗೆ ದೊರೆತ ಸಂಸ್ಕಾರಗಳು ಅವರನ್ನು ಉತ್ತಮ ಮನುಷ್ಯರನ್ನಾಗಿಸುತ್ತಿದೆ. ಹಾಗೆಯೇ ಸಮಾಜವನ್ನೂ ಇಂತಹ ಅಲೆಮಾರಿ ಮಕ್ಕಳು ಅಪರಾಧಿಗಳಾಗುವ ಚಿಂತೆಯಿಂದ ಮುಕ್ತವಾಗಿಸುತ್ತದೆ.

ಸಂಪರ್ಕ: ರಾಮ ಕುಮಾರ್, ಮೊ: 9312936897

## ಹೆಲ್ಮೆಟ್ ತಪ್ಪದೇ ಧರಿಸಿ

ದ್ವಿಚಕ್ರ ವಾಹನ ಸವಾರರು ಹೆಲ್ಮೆಟ್ ಧರಿಸುವುದು ಕಡ್ಡಾಯ ಎನ್ನುವುದು ನಿಯಮವಾಗಿ ಹಲವು ವರ್ಷಗಳಾದರೂ ಅದು ಜನರ ಜೀವನಶೈಲಿಯಾಗಲು ಇನ್ನೂ ಹಲವು ವರ್ಷಗಳು ಬೇಕು ಎನ್ನುವುದನ್ನು ಅಂಕಿ ಅಂಶಗಳು ತಿಳಿಸುತ್ತವೆ. 2021ರಲ್ಲಿ ಹೆಲ್ಮೆಟ್ ಧರಿಸದ ಕಾರಣ ಒಟ್ಟು 46,593 ಜನರು ಸಾವನ್ನಪ್ಪಿದ್ದಾರೆ. ಅದರಲ್ಲಿ 32,877 (70.6%) ವ್ಯಕ್ತಿಗಳು ಚಾಲಕರು ಮತ್ತು 13,716 (29.4%) ಪ್ರಯಾಣಿಕರು. ಇದಲ್ಲದೆ, ಅದೇ ವರ್ಷ ಹೆಲ್ಮೆಟ್ ಧರಿಸದೇ ಇರುವ ಕಾರಣದಿಂದ ಗಾಯಗೊಂಡವರ ಸಂಖ್ಯೆ 93,763. 2022ರಲ್ಲಿ ಹೆಲ್ಮೆಟ್ ಧರಿಸದೇ ಸಾವನ್ನಪ್ಪಿದವರ ಸಂಖ್ಯೆ 52000ಕ್ಕೂ ಅಧಿಕ ಎಂದು ಹೇಳುತ್ತದೆ ಅಂಕಿಅಂಶಗಳು.

ಈ ಅಂಕಿಅಂಶಗಳನ್ನು ಗಮನಿಸಿದರೆ ಹೆಲ್ಮೆಟ್ ಜೀವರಕ್ಷಕ ಎಂಬುದು ಸತ್ಯ ಎಂಬುದು ಮನವರಿಕೆ ಆಗುತ್ತದೆ. ಹೀಗಾಗಿ ಹೆಲ್ಮೆಟ್ ಬಗೆಗೆ ನಿರ್ಲಕ್ಷ್ಯ ಯಾವತ್ತೂ ಸಲ್ಲದು. ಪೊಲೀಸರ ಭಯಕ್ಕೋ, ದಂಡದ ಭಯಕ್ಕೋ ಕಾಟಾಚಾರಕ್ಕೆ ಹೆಲ್ಮೆಟ್ ಧರಿಸುವುದು ಅಥವಾ ಪೊಲೀಸರನ್ನು ಕಂಡಾಗ ಮಾತ್ರ ಹೆಲ್ಮೆಟ್ ಧರಿಸಿ ಸಾಗುವುದರಿಂದ ದಂಡ ಕಟ್ಟುವುದರಿಂದ ಬಚಾವಾಗಬಹುದು ಆದರೆ ಅಪಘಾತವಾದಾಗ ಜೀವ ಉಳಿಸಿಕೊಳ್ಳುವುದರಿಂದ ಬಚಾವಾಗಬೇಕಾದರೆ ಹೆಲ್ಮೆಟ್ ಧರಿಸಲೇಬೇಕು. ಇನ್ನು ಕೆಲವರು ಇದೇ ಕಾರಣಗಳಿಗೆ ಗುಣಮಟ್ಟ ಕಡಿಮೆ ಇರುವ ಕಡಿಮೆ ಬೆಲೆಯ ಹೆಲ್ಮೆಟ್ ಖರೀದಿಸುವುದೂ ಇದೆ. ಆದರೆ ಗುಣಮಟ್ಟದ ಹೆಲ್ಮೆಟ್‌ಗೆ ವ್ಯಯಿಸುವ ಹಣ ನಿಮ್ಮ ಜೀವ ರಕ್ಷಣೆಗಾಗಿ ಎಂಬುದನ್ನು ಮರೆಯಬಾರದು.



ಸಂಪಾದಕೀಯ ಸಹಕಾರ: ಸೋಮೇಶ್ವರ ಗುರುಮಠ, ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ಮೇಘಾ ಪ್ರಮೋದ್, ಪಂಚಮಿ ಬಾಕಿಲಪದವು

## 3ನೇ ಅತಿದೊಡ್ಡ ಮೆಟ್ರೋ ಜಾಲ ಹೊಂದಿದೆ ಭಾರತ

ಭಾರತವು ಈಗ 1,000 ಕಿಮೀ ಕಾರ್ಯಾಚರಣೆಯ ಉದ್ದದೊಂದಿಗೆ



ವಿಶ್ವದ ಮೂರನೇ ಅತಿದೊಡ್ಡ ಮೆಟ್ರೋ ರೈಲು ಜಾಲವನ್ನು ಹೊಂದಿದೆ. ಈ ವಿಶಾಲವಾದ ನೆಟ್‌ವರ್ಕ್ ಭಾರತವನ್ನು ವಿಶ್ವದ ಮೂರನೇ ಅತಿದೊಡ್ಡ ಮೆಟ್ರೋ ವ್ಯವಸ್ಥೆಯಾಗಿ ಮಾಡಿದೆ. ಚೀನಾ ಮತ್ತು ಯುನೈಟೆಡ್ ಸ್ಟೇಟ್ಸ್‌ನ ನಂತರದ ಸ್ಥಾನದಲ್ಲಿ ಭಾರತ ಇದೆ. ಭಾರತವು 2022ರಲ್ಲಿ ಮೆಟ್ರೋ ರೈಲು ಯೋಜನೆಗಳಲ್ಲಿ ಜಪಾನ್ ಅನ್ನು ಮೀರಿಸಿದೆ ಮತ್ತು ಕಾರ್ಯಾಚರಣೆಯ ಮೆಟ್ರೋ ನೆಟ್‌ವರ್ಕ್ ಉದ್ದದಲ್ಲಿ ಜಾಗತಿಕವಾಗಿ ಮೂರನೇ ಸ್ಥಾನದಲ್ಲಿದೆ. ದೇಶವು ವಿಶ್ವದ ಎರಡನೇ ಅತಿದೊಡ್ಡ ಮೆಟ್ರೋ ನೆಟ್ವರ್ಕ್ ಆಗುವ ಹಾದಿಯಲ್ಲಿದೆ.

## ಚಾಲಕ ತರಬೇತಿ ಸಂಸ್ಥೆಗಳಿಗೆ ನೂತನ ಯೋಜನೆ




ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಚಾಲಕ ತರಬೇತಿ ಸಂಸ್ಥೆಗಳ (ಡಿಟಿಐ) ಪ್ಯಾನ್–ಇಂಡಿಯಾ ಸೆಟಪ್ ಯೋಜನೆಯನ್ನು ಘೋಷಣೆ ಮಾಡಿದ್ದಾರೆ. ಈ ಯೋಜನೆ ಡಿಟಿಐಗಳನ್ನು ಸ್ಥಾಪಿಸಲು ಪ್ರೋತ್ಸಾಹ ಮತ್ತು ಸ್ವಯಂಚಾಲಿತ ಪರೀಕ್ಷಾ ಕೇಂದ್ರಗಳು (ಎಟಿಎಸ್) ಮತ್ತು ಡಿಟಿಐಗಳ ಸಮಗ್ರ ಮೂಲಸೌಕರ್ಯಗಳಿಗೆ ಹೆಚ್ಚುವರಿ ಪ್ರೋತ್ಸಾಹವನ್ನು ನೀಡುತ್ತದೆ. ದೇಶದಲ್ಲಿ ನುರಿತ ಚಾಲಕರ ಅಗತ್ಯತೆ ಹೆಚ್ಚಿರುವ ಕಾರಣ ಈ ಯೋಜನೆಯ ಮೂಲಕ ಚಾಲನಾ ತರಬೇತಿ ಕೇಂದ್ರಗಳನ್ನು ಹೆಚ್ಚು ತೆರೆಯುವುದಕ್ಕೆ ಸರ್ಕಾರ ಮುಂದಾಗಿದೆ.

# ಸಾಲುದ್ದದ ಸುದ್ದಿಗಳು

## ಭಾರತೀಯ ಪರಮಾಣು ಘಟಕಗಳ ಮೇಲಿನ ನಿರ್ಬಂಧ ತೆರವುಗೊಳಿಸಿದ ಯುಎಸ್

ಭಾಭಾ ಪರಮಾಣು ಸಂಶೋಧನಾ ಕೇಂದ್ರ (BARC), ಇಂಡಿಯನ್ ರೇರ್ ಅರ್ಥ್ಸ್ ಮತ್ತು ಇಂದಿರಾ ಗಾಂಧಿ ಅಟಾಮಿಕ್ ರಿಸರ್ಚ್ ಸೆಂಟರ್ ಮೂರು ಭಾರತೀಯ ಘಟಕಗಳ ಮೇಲಿನ ನಿರ್ಬಂಧಗಳನ್ನು ಯುಎಸ್ ತೆಗೆದುಹಾಕಿದೆ. ಯುಎಸ್‌ಡಿ ಬ್ಯೂರೋ ಆಫ್ ಇಂಡಸ್ಟ್ರಿ ಅಂಡ್ ಸೆಕ್ಯುರಿಟಿ (ಬಿಐಎಸ್)ಯು ಶೀತಲ ಸಮರದ ಸಮಯದಲ್ಲಿ ವಿಧಿಸಲಾದ ನಿರ್ಬಂಧಗಳನ್ನು ತೆರವುಗೊಳಿಸಿದೆ. ಈ ನಿರ್ಧಾರವು ಭಾರತ ಮತ್ತು ಅಮೆರಿಕಾ ನಡುವಿನ ಇಂಧನ ಸುರಕ್ಷತೆ ಅಗತ್ಯಗಳು, ವಿಜ್ಞಾನ ಮತ್ತು ತಂತ್ರಜ್ಞಾನದ ಜಂಟಿ ಪ್ರಯತ್ನಗಳನ್ನು ಬೆಂಬಲಿಸುತ್ತದೆ.

## ದಿನಕ್ಕೆ ಸರಾಸರಿ 30,000 ನೋಂದಣಿಗಳನ್ನು ದಾಖಲಿಸುತ್ತಿದೆ ಇ–ಶ್ರಮ್ ಪೋರ್ಟಲ್

ಎಲ್ಲಾ ಅಸಂಘಟಿತ ಕಾರ್ಮಿಕರು ತಮ್ಮ ಕಲ್ಯಾಣ, ಜೀವನೋಪಾಯ ಮತ್ತು ಯೋಗಕ್ಷೇಮವನ್ನು ಬೆಂಬಲಿಸಲು ವಿನ್ಯಾಸಗೊಳಿಸಲಾದ ವಿವಿಧ ಸರ್ಕಾರಿ ಯೋಜನೆಗಳ ಪ್ರಯೋಜನಗಳನ್ನು ಪಡೆಯಲು ಇ–ಶ್ರಮ್ ಪೋರ್ಟಲ್ ಸಹಕಾರಿ. ಇ–ಶ್ರಮ್ ಪೋರ್ಟಲ್ ಅಸಂಘಟಿತ ಕಾರ್ಮಿಕರಿಂದ ದಿನಕ್ಕೆ ಸರಾಸರಿ 30,000 ಕ್ಕೂ ಹೆಚ್ಚು ನೋಂದಣಿಗಳನ್ನು ದಾಖಲಿಸುತ್ತಿದೆ. ಪೋರ್ಟಲ್‌ನಲ್ಲಿ ನೋಂದಣಿಯು ಸಾಮಾಜಿಕ ಭದ್ರತಾ ಯೋಜನೆಗಳು ಮತ್ತು ಉಪಕ್ರಮಗಳ ವಿಶಾಲ ವ್ಯಾಪ್ತಿಯ ಪ್ರವೇಶವನ್ನು ಸುಲಭಗೊಳಿಸುತ್ತದೆ. ಇ–ಶ್ರಮ್ ಪೋರ್ಟಲ್ ಮೂಲಕ ಕೇಂದ್ರ ಸರ್ಕಾರ ಹನ್ನೆರಡು ಯೋಜನೆಗಳಿಗೆ ಪ್ರವೇಶವನ್ನು ಒದಗಿಸಿದೆ. ಇ–ಶ್ರಮ್ ಪೋರ್ಟಲ್ ಈಗ ಎಲ್ಲಾ 22 ನಿಗದಿತ ಭಾಷೆಗಳಲ್ಲಿ ಲಭ್ಯವಿದೆ.

## ಚೊಚ್ಚಲ ಖೋಖೋ ವಿಶ್ವಕಪ್: ಭಾರತದ ಎರಡೂ ತಂಡಗಳು ಚಾಂಪಿಯನ್



ಭಾರತದಲ್ಲೇ ನಡೆದ ಚೊಚ್ಚಲ ಖೋಖೋ ವಿಶ್ವಕಪ್‌ನಲ್ಲಿ ಭಾರತೀಯ ಪುರುಷರ ಮತ್ತು ಮಹಿಳೆಯರ ತಂಡ ಚಾಂಪಿಯನ್ ಆಗಿದೆ. ಭಾರತೀಯ ಪುರುಷರ ತಂಡವು ನೇಪಾಳವನ್ನು 54–36 ಅಂತರದಿಂದ ಸೋಲಿಸಿ ಪ್ರಥಮ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಇದಕ್ಕೂ ಕೆಲವು ಗಂಟೆಗಳ ಮೊದಲು, ಭಾರತೀಯ ಮಹಿಳಾ ತಂಡವು ನೇಪಾಳವನ್ನು 78–40 ಅಂತರದಿಂದ ಸೋಲಿಸಿ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು. ಚೊಚ್ಚಲ ಖೋಖೋ ವಿಶ್ವಕಪ್‌ನಲ್ಲಿ 20 ಪುರುಷರ ತಂಡ, 19 ಮಹಿಳೆಯರ ತಂಡ ಭಾಗವಹಿಸಿತ್ತು.




# ಗ್ರಾಮವಿಕಾಸಕ್ಕೆ ಪಣತೊಟ್ಟುನಿಂತ ಜೀರಿಗಿವಾಡದ ಯುವಪಡೆ

ಪ್ರೇರಣಾ

"ಕಬ್ಬಿಣದಂತಹ ಸ್ನಾಯುಗಳು ಉಕ್ಕಿನ ನರಮಂಡಲಗಳು, ಸಿಡಿಲಿನಂತಹ ಇಚ್ಛಾಶಕ್ತಿ ಇರುವ ಕೆಲವೇ ಕೆಲವು ತರುಣರನ್ನು ಕೊಡಿ ನಾನು ಇಡೀ ದೇಶದ ಭವಿಷ್ಯವನ್ನೇ ಬದಲಿಸುತ್ತೇನೆ" ಎಂಬ ಸ್ವಾಮಿ ವಿವೇಕಾನಂದರ ಮಾತಿನಂತೆ ಧಾರವಾಡದ ಜೀರಿಗಿವಾಡ ಗ್ರಾಮದ ಸುಮಾರು 100 ಮಂದಿ ಯುವಕರ ತಂಡ ತಮ್ಮ ಗ್ರಾಮವನ್ನು ಉತ್ತರ ಕರ್ನಾಟಕದಲ್ಲಿ ಮಾದರಿ ಗ್ರಾಮ ಮಾಡಬೇಕೆಂಬ ಉದ್ದೇಶದಿಂದ ಕಾರ್ಯಪ್ರವೃತ್ತರಾದರು. ಗ್ರಾಮದ ಎಲ್ಲ ಕೆಲಸ ಕಾರ್ಯಗಳಿಗೆ ಕೈ ಜೋಡಿಸಿದರು. ಊರಿನ ಕೆರೆ, ಬಾವಿ, ಶಾಲೆ ಅವರಣವನ್ನು ಪ್ರತಿ ಭಾನುವಾರ ಶ್ರಮದಾನದ ಮೂಲಕ ಸ್ವಚ್ಛಗೊಳಿಸುವ ಕಾರ್ಯ ಮಾಡುತ್ತಾರೆ. ಹೀಗೆ ಗುರಿಯನ್ನಿಟ್ಟುಕೊಂಡಿರುವುದು ಮಾತ್ರವಲ್ಲದೆ, ಇಟ್ಟುಕೊಂಡಿರುವ ಗುರಿಯನ್ನು ತಲುಪುವತ್ತ ಈ ಗ್ರಾಮದ ಯುವಕರು ಅವಿರತ ಶ್ರಮಪಡುತ್ತಿದ್ದಾರೆ.

ಗ್ರಾಮದಲ್ಲಿ 1,500 ಜನಸಂಖ್ಯೆ ಇದ್ದು, 9 ದೇವಸ್ಥಾನ ಮತ್ತು 4 ಬಾವಿಗಳಿವೆ. ನರೇಗಾ ಯೋಜನೆಯಡಿಯಲ್ಲಿ ಗ್ರಾಮದಲ್ಲಿದ್ದ ಕೆರೆಗಳ ಹೂಳನ್ನೆತ್ತಿ, ಯೋಜನೆಯ ಜಾಬ್‌ಕಾರ್ಡ್ ಇದ್ದವರು ಅಲ್ಲಿ ಕೆಲಸ ಮಾಡಿದರು. ಎಲ್ಲರೂ ಕೂಲಿ ಹಣವನ್ನು ಕೆರೆ ಅಭಿವೃದ್ಧಿಗೆ ನೀಡಿದರು. ಟ್ರ್ಯಾಕ್ಟರ್ ಟ್ರ್ಯಾಲಿ ಮೂಲಕ ಅಂದಾಜು 4 ಸಾವಿರಕ್ಕಿಂತ ಹೆಚ್ಚು ಟ್ರಿಪ್ ಮಣ್ಣನ್ನು ಕೆರೆಯಿಂದ ಹೊರ ತೆಗೆದು, ಗ್ರಾಮದ ರಸ್ತೆ, ಮನೆಯ ಹಿತ್ತಲು, ಹೊಲಗಳಿಗೆ ಹಾಕಿಸಿಕೊಂಡರು. ಎಲ್ಲ ಮೂಲಗಳಿಂದ ಹಣ ಸಂಗ್ರಹಿಸಿ ಅಂದಾಜು 10 ಲಕ್ಷ ರೂ. ವೆಚ್ಚದಲ್ಲಿ ಕೆರೆಯನ್ನು ಗ್ರಾಮದಲ್ಲಿ ಅಭಿವೃದ್ಧಿಪಡಿಸಿದ್ದಾರೆ.

ಇದರ ಜೊತೆಗೆ ಸಾಮಾಜಿಕವಾಗಿ ತಮ್ಮ ಗ್ರಾಮಕ್ಕೆ ಕಂಟಕವಾಗಬಲ್ಲಂತಹ ತಂಬಾಕು, ಗುಟ್ಕಾ, ಮದ್ಯ ಮಾರಾಟ ಮಾಡುವುದಿಲ್ಲ. ಅಲ್ಲಿ ಯಾರೂ ಇಸ್ಪೀಟ್ ಆಡುವುದಿಲ್ಲ. ಕೆಟ್ಟ ವ್ಯಸನಗಳ ದಾಸರಾಗದೆ, ಗ್ರಾಮದ ಅಭಿವೃದ್ಧಿಗಾಗಿ ಯುವಕರು ಕಟಿಬದ್ಧರಾಗಿರುವುದು ದೇಶದಾದ್ಯಂತದ ಜನರು ಈ ಗ್ರಾಮವನ್ನು ನೋಡುವಂತೆ ಮಾಡಿದೆ.



ಗ್ರಾಮದಲ್ಲಿ ಹಿರಿಯ ಪ್ರಾಥಮಿಕ ಶಾಲೆ ಇದ್ದು, ಇಲ್ಲಿ 103 ವಿದ್ಯಾರ್ಥಿಗಳು ಓದುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ಸುಸಜ್ಜಿತ ಶಾಲೆ, ತರಗತಿ ಕೊಠಡಿ ನಿರ್ಮಿಸಬೇಕು ಎಂಬ ಉದ್ದೇಶದಿಂದ ವಿವಿಧ ದಾನಿಗಳ ನೆರವು ಪಡೆದು ಅಂದಾಜು 1 ಕೋಟಿ ರೂ. ವೆಚ್ಚದಲ್ಲಿ ಶಾಲೆ ಕಟ್ಟಡ ನಿರ್ಮಿಸಲಾಗಿದೆ. ಶಾಲೆಗೆ ಹೊಂದಿಕೊಂಡಂತೆ ಸುಸಜ್ಜಿತ ಅಂಗನವಾಡಿ ಕಟ್ಟಡ ಕೂಡ ನಿರ್ಮಿಸಲಾಗುತ್ತಿದೆ. ಯೂತ್ ಫಾರ್ ಸೇವಾ ಮತ್ತು ಧಾರವಾಡದ ರಾಷ್ಟ್ರೋತ್ಥಾನ ಕೇಂದ್ರದವರು ಶಾಲೆ ವಿದ್ಯಾರ್ಥಿಗಳಿಗೆ ಅಗತ್ಯ ಸೌಲಭ್ಯ ನೀಡಲು ಮುಂದೆ ಬಂದಿದ್ದಾರೆ ಅನ್ನುವ ಸಂತೋಷದ ಸಮಾಚಾರವನ್ನು ಯುವಕರು ವ್ಯಕ್ತಪಡಿಸುತ್ತಾರೆ.

ಹೀಗೆ ಗ್ರಾಮವೊಂದು ಎಲ್ಲಾ ಗ್ರಾಮಕ್ಕಿಂತ ವಿಭಿನ್ನವಾಗಿ ಕಾಣಲು ಎಲ್ಲಾ ಗ್ರಾಮಸ್ಥರ ಶ್ರಮ ಮುಖ್ಯ. ಅದರಲ್ಲೂ ಯುವಕರು ವ್ಯಸನಗಳಿಗೆ ಶರಣಾಗುತ್ತಿರುವ, ಸಾಮಾಜಿಕ ಜಾಲತಾಣಗಳ ದಾಸರಾಗುತ್ತಿರುವ ನಿದರ್ಶನಗಳನ್ನು ಕಾಣುತ್ತಿರುವ ಹೊತ್ತಿನಲ್ಲಿ ಗ್ರಾಮವಿಕಾಸದ ಕಾರ್ಯದತ್ತ ಹೆಜ್ಜೆ ಹಾಕುತ್ತಿರುವುದು ಅಭಿನಂದನೀಯ ಕಾರ್ಯ. ಇತರ ಗ್ರಾಮಗಳಿಗೂ ಮಾದರಿಯಾಗಿ ನಿಂತಿರುವ ಈ ಗ್ರಾಮ ಹೊಸ ಪರಿಕಲ್ಪನೆಯನ್ನು ರಾಷ್ಟ್ರಕ್ಕೆ ನೀಡಿದೆ.

## ಬ್ರಿಟಿಷರು ಭಾರತದಿಂದ ದೋಚಿದ್ದು 5000ಲಕ್ಷ ಕೋಟಿ ರೂ.!

ಬ್ರಿಟಿಷ್ ವಸಾಹತು ಅವಧಿಯಲ್ಲಿ ಅವರು ಭಾರತದಿಂದ ಲೂಟಿ ಹೊಡೆದ ಸಂಪತ್ತಿನ ಮೌಲ್ಯ 5 ಸಾವಿರ ಲಕ್ಷ ಕೋಟಿ ರುಪಾಯಿ! ದಾವೋಸ್‌ನಲ್ಲಿ ಆರಂಭವಾಗಿರುವ ವಿಶ್ವ ಆರ್ಥಿಕ ಫೋರಂನಲ್ಲಿ ಬಿಡುಗಡೆ ಮಾಡಿದ 'ಟೇಕರ್ಸ್ ನಾಟ್ ಮೇಕರ್ಸ್' (ಪಡೆದವರು, ಸೃಷ್ಟಿಸಿದವರಲ್ಲ) ಎಂಬ ಹೆಸರಿನ ಈ ವರದಿಯು ಈ ಮಾಹಿತಿಯನ್ನು ಉಲ್ಲೇಖಿಸಿದೆ. 1750ರಲ್ಲಿ ಭಾರತ ಉಪಖಂಡವು ಅಂತಾರಾಷ್ಟ್ರೀಯ ಕೈಗಾರಿಕಾ ಉತ್ಪಾದನೆಯಲ್ಲಿ ಶೇ.25ರಷ್ಟು ಪಾಲು ಹೊಂದಿತ್ತು. ಆದರೆ 1900ರ ಹೊತ್ತಿಗೆ ಇದು ಶೇ.2ಕ್ಕೆ ಕುಸಿಯಿತು. ಇದಕ್ಕೆ ಬ್ರಿಟಿಷರು ಏಷ್ಯಾದ ಜವಳಿ ಉದ್ಯಮದ ವಿಚಾರವಾಗಿ ಅನುಸರಿಸಿದ ನೀತಿಗಳೇ ಕಾರಣ ಎಂದು ಆಕ್ಸ್‌ಫಾಮ್ ತಿಳಿಸಿದೆ.

1765–1900ರ ನಡುವಿನ ವಸಾಹತುಶಾಹಿ ಅವಧಿಯಲ್ಲಿ ಭಾರತವೊಂದರಿಂದಲೇ 5,609 ಲಕ್ಷ ಕೋಟಿ ರೂ. ಅನ್ನು ಬ್ರಿಟನ್ ಲೂಟಿಹೊಡೆದಿದೆ. ಇದರಲ್ಲಿ 2,925 ಲಕ್ಷ ಕೋಟಿ ರೂ.ನಷ್ಟು ಸಂಪತ್ತು ಶೇ.10ರಷ್ಟಿದ್ದ ಬ್ರಿಟನ್ ಶ್ರೀಮಂತರ ಪಾಲಾಗಿದೆ ಎಂದು 'ಆಕ್ಸ್‌ಫಾಮ್ ಇಂಟರ್‌ನ್ಯಾಷನಲ್' ಸಂಸ್ಥೆಯ ವಿಶ್ವ ಅಸಮಾನತೆ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಬಹುರಾಷ್ಟ್ರೀಯ ಕಾರ್ಪೊರೇಷನ್‌ಗಳು ವಸಹಾತುಶಾಹಿಯ ಸೃಷ್ಟಿ ಅಷ್ಟೆ. ವಸಹಾತುಶಾಹಿ ಕಾಲದಲ್ಲಿ ಯಾವ ರೀತಿ ಲೂಟಿ ನಡೆಯುತ್ತಿತ್ತೋ ಅಂಥದ್ದೇ ಲೂಟಿಯನ್ನು ಬಹುರಾಷ್ಟ್ರೀಯ ಕಂಪನಿಗಳು ಮಾಡುತ್ತಿವೆ. ಸಂಪತ್ತು ಕೆಲವೇ ಕೆಲವರ ಕೈಯಲ್ಲಿ ಕ್ರೋಢೀಕರಣವಾಗುತ್ತಿದೆ.

ವಸಾಹತುಶಾಹಿ ಸಂಪನ್ಮೂಲ ಶೋಷಣೆ ಪದ್ಧತಿಗಳು ಇಂದಿನ ಹವಾಮಾನ ಬಿಕ್ಕಟ್ಟಿಗೆ ಅಡಿಪಾಯ ಹಾಕಿದವು. ವಸಾಹತುಶಾಹಿ ಕಾಲದಲ್ಲಿ ಪ್ರಾರಂಭವಾದ ಪಳೆಯುಳಿಕೆ ಇಂಧನ ಹೊರತೆಗೆಯುವಿಕೆ, ಹವಾಮಾನ ಕುಸಿತವನ್ನು ವೇಗಗೊಳಿಸುವುದನ್ನು ಮುಂದುವರೆಸಿದೆ. ಜಾಗತಿಕ ಉತ್ತರದ ಆರ್ಥಿಕತೆಗಳಿಂದ ಉಂಟಾದ ಪರಿಸರದ ಅವನತಿಯ ಭಾರವನ್ನು ಹೊಂದಿರುವ ಜಾಗತಿಕ ದಕ್ಷಿಣದ ದೇಶಗಳ ಮೇಲೆ ಹೊರೆಯು ಅಸಮಾನವಾಗಿ ಬೀಳುತ್ತದೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th JANUARY 2025

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26

FORTNIGHTLY 01-02-2025



## ಪ್ರತಿಷ್ಠಾ ದ್ವಾದಶಿ: ಭಾರತದ 'ಸ್ವ' ಆಧಾರಿತ ಸ್ವತಂತ್ರತೆಯ ಪ್ರತಿಷ್ಠಾಪನೆ

**ಇಂದೋರ್:** ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ.ಮೋಹನ್ ಭಾಗವತ್ ಅವರು ರಾಮಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರೈ ಅವರಿಗೆ ಅಹಲ್ಯಾದೇವಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಭಾಷಣದ ಸಾರಾಂಶ: "ಪ್ರತಿಷ್ಠಾ ದ್ವಾದಶಿ", ಪುಷ್ಯ ಶುಕ್ಲ ದ್ವಾದಶಿಗೆ ಹೊಸ ನಾಮಕರಣವಾಗಿದೆ. ಮೊದಲು ನಾವು ವೈಕುಂಠ ಏಕಾದಶಿ, ವೈಕುಂಠ ದ್ವಾದಶಿ ಎಂದು ಕರೆಯುತ್ತಿದ್ದೆವು, ಈಗ ಇದನ್ನು 'ಪ್ರತಿಷ್ಠಾ ದ್ವಾದಶಿ' ಎಂದು ಕರೆಯುವುದು ಏಕೆಂದರೆ ಹಲವು ಶತಮಾನಗಳಿಂದ ಪರತಂತ್ರವನ್ನು (ಪರಕೀಯರ ಆಡಳಿತ) ಹೊರಿಸಲ್ಪಟ್ಟು ಸಹಿಸಿದ ಭಾರತದ ನಿಜವಾದ ಸ್ವತಂತ್ರತೆಯ ಪ್ರತಿಷ್ಠಾಪನೆ ಈ ದಿನದಂದು ಆಯಿತು. ಸ್ವಾತಂತ್ರ್ಯವಿತ್ತು, ಆದರೆ ಅದು ಪ್ರತಿಷ್ಠಾಪಿತವಾಗಿರಲಿಲ್ಲ. ಆಗಸ್ಟ್ 15 ರಂದು ಭಾರತ ಸ್ವತಂತ್ರವಾಯಿತು, ನಮಗೆ ರಾಜಕೀಯ ಸ್ವಾತಂತ್ರ್ಯ ಸಿಕ್ಕಿತು. ನಮ್ಮ ಭವಿಷ್ಯವನ್ನು ನಿರ್ಧರಿಸುವುದು ನಮ್ಮ ಕೈಯಲ್ಲಿದೆ. ನಾವು ಒಂದು ಸಂವಿಧಾನವನ್ನು ಕೂಡಾ ರಚಿಸಿದ್ದೇವೆ, ಅದು ಭಾರತದ 'ಸ್ವ' ಆಧಾರಿತವಾಗಿಯೇ ಹೊರಹೊಮ್ಮಿದ ಒಂದು ವಿಶಿಷ್ಟ ದೃಷ್ಟಿಯಾಗಿದೆ. ಆದರೆ ಸಂವಿಧಾನದಲ್ಲಿ ದಿಗ್ದರ್ಶನಗೊಂಡ ಭಾರತದ ಸ್ವತ್ವವನ್ನು, ಅದರ ಭಾವವನ್ನು ಅನುಸರಿಸಿ ಸಾಗಲು ಆಗಿಲ್ಲ.

ಆದ್ದರಿಂದ, ಕವಿವಾಣಿಯೊಂದು ಹೀಗೆ ಹೇಳುತ್ತದೆ. "ನಮ್ಮ ಎಲ್ಲಾ ಕನಸುಗಳು ನನಸಾಗಿವೆ ಎಂದೋ, ನೋವಿನ ಭಾರವನ್ನು ನಮ್ಮ ತಲೆಯಿಂದ ತೆಗೆದುಹಾಕಲಾಗಿದೆ ಎಂದೋ ನಾವು ಹೇಗೆ ಒಪ್ಪಿಕೊಳ್ಳಲು




ಸಾಧ್ಯ?" ಸಮಾಜದ ಪರಿಸ್ಥಿತಿ ಹೀಗಿದೆ, ಏಕೆಂದರೆ 'ಸ್ವ'ದ ಅಧಿಷ್ಠಾನಕ್ಕೆ ಅಗತ್ಯವಾದ ಸ್ವಾತಂತ್ರ್ಯವು ಲಿಖಿತ ರೂಪದ ಸಂವಿಧಾನದ ಮೂಲಕ ಲಭ್ಯವಾಗಿದೆ, ಆದರೆ ನಾವು ಅದರ ದೃಢವಾದ ಅಡಿಪಾಯದಲ್ಲಿ ನಮ್ಮ ಮನಸ್ಸನ್ನು ಸ್ಥಾಪಿಸಿಲ್ಲ.

ನಮ್ಮ 'ಸ್ವ' ಯಾವುದು? ರಾಮ-ಕೃಷ್ಣ-ಶಿವ, ಅವರು ಕೇವಲ ದೇವರು ಮತ್ತು ದೇವತೆಗಳೇ ಅಥವಾ ಅವರನ್ನು ಪೂಜಿಸುವವರಿಗೆ ಮಾತ್ರ ಅವರು ಸೀಮಿತರೇ? ಅದು ಹಾಗಲ್ಲ. ರಾಮನು ಉತ್ತರದಿಂದ ಮತ್ತು ದಕ್ಷಿಣ ಭಾರತವನ್ನು ಜೋಡಿಸುತ್ತಾನೆ.

## ಧಾರ್ಮಿಕ ಸ್ಥಳಗಳಲ್ಲಿ ವಿಐಪಿ ಸಂಸ್ಕೃತಿ ಇರಲೇಬಾರದು: ಉಪರಾಷ್ಟ್ರಪತಿ

ವಿಐಪಿ ದರ್ಶನದ ಕಲ್ಪನೆಯೇ ದೈವತ್ವಕ್ಕೆ ವಿರುದ್ಧವಾಗಿರುವುದರಿಂದ ನಾವು ವಿಐಪಿ ಸಂಸ್ಕೃತಿಯನ್ನು ವಿಶೇಷವಾಗಿ ದೇವಾಲಯಗಳಲ್ಲಿ ತೊಡೆದುಹಾಕಬೇಕು ಎಂದು ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಹೇಳಿದ್ದಾರೆ.

ಧರ್ಮಸ್ಥಳ ಶ್ರೀ ಮಂಜುನಾಥ ದೇವಸ್ಥಾನದಲ್ಲಿ ದೇಶದ ಅತಿ ದೊಡ್ಡ ಸರತಿ ಸಾಲು ಸಂಕೀರ್ಣಕ್ಕೆ ಉಪರಾಷ್ಟ್ರಪತಿ ಚಾಲನೆ ನೀಡಿದರು. ಈ ಸೌಲಭ್ಯವನ್ನು 'ಶ್ರೀ ಸಾನಿಧ್ಯ' ಎಂದು ಕರೆಯಲಾಗುತ್ತದೆ. ಶ್ರೀ ಸಾನಿಧ್ಯ ಉದ್ಘಾಟಿಸಿದ ಬಳಿಕ ಮಾತನಾಡಿದ ಅವರು, 2047ರ ವೇಳೆಗೆ ಅಭಿವೃದ್ಧಿ ಹೊಂದಿದ ಭಾರತದ ಗುರಿಯನ್ನು ತಲುಪಲು ದೇಶಕ್ಕೆ ಸಹಾಯ ಮಾಡಲು ಕರೆ ನೀಡಿದರು.

ಯಾರಿಗಾದರೂ ಹೆಚ್ಚಿನ ಆದ್ಯತೆ ನೀಡುವುದನ್ನು ನಾವು ವಿವಿಐಪಿ ಅಥವಾ ವಿಐಪಿ ಎಂದು ಕರೆಯುತ್ತೇವೆ. ಇದು ಸಮಾನತೆಯ ಪರಿಕಲ್ಪನೆಯನ್ನು ಕಡಿಮೆಗೊಳಿಸುತ್ತದೆ. ಸಮಾನತೆಯ ಅಂಗಳದಲ್ಲಿ ನೋಡಿದಾಗ, ಅದಕ್ಕೆ ಸಮಾಜದಲ್ಲಿ ಸ್ಥಾನವಿಲ್ಲ, ಧಾರ್ಮಿಕ ಸ್ಥಳಗಳಲ್ಲಿ ವಿಐಪಿ ಸಂಸ್ಕೃತಿ ಇರಲೇಬಾರದು ಎಂದು ಅಭಿಪ್ರಾಯಪಟ್ಟರು. ವಿಭಜನೆಗಳು ಮತ್ತು ತಪ್ಪು ಮಾಹಿತಿಯ ಮೂಲಕ ನಮ್ಮನ್ನು ದುರ್ಬಲಗೊಳಿಸಲು ಪ್ರಯತ್ನಿಸುತ್ತಿರುವ ಭಾರತ ವಿರೋಧಿ ಶಕ್ತಿಗಳನ್ನು ನಾವು ತಟಸ್ಥಗೊಳಿಸಬೇಕು. ನಮ್ಮ ದೇಶದ ಶ್ರೇಷ್ಠ ಹೆಸರನ್ನು ಮತ್ತು ಜನ ಕಲ್ಯಾಣ ಮತ್ತು ನಮ್ಮ ಪ್ರಜಾಪ್ರಭುತ್ವವನ್ನು ಬಲಪಡಿಸುವ ಅಂಶಗಳಿಗೆ ಕಳಂಕ ತರುವುದನ್ನು ನಾವು ನಿಲ್ಲಿಸಬೇಕು. ಭಾರತವು ತನ್ನ ಅಭಿವೃದ್ಧಿಯಲ್ಲಿ ಬಹು ಹಂತಗಳಲ್ಲಿ ಮುನ್ನಡೆಯುತ್ತಿರುವ



ಸಮಯದಲ್ಲಿ, ನಾವು ವಿಭಜಕ ಶಕ್ತಿಗಳ ವಿರುದ್ಧ ಹೊಸ ನಿರೂಪಣೆಯನ್ನು ಪ್ರಾರಂಭಿಸಬೇಕು ಮತ್ತು ನಮ್ಮ ಸಂಕಲ್ಪದೊಂದಿಗೆ ಒಗ್ಗಟ್ಟಿನ, ಕೇಂದ್ರೀಕೃತ ಮತ್ತು ಅಭಿವೃದ್ಧಿ ಆಧಾರಿತವಾಗಿ ಅವರನ್ನು ಸೋಲಿಸಬೇಕು ಎಂದರು.

ನಮ್ಮ ನಾಗರಿಕ ಜೀವನ ಇನ್ನಷ್ಟು ಬೆಳಗಬೇಕು. ದೇಶದಲ್ಲಿ ಸೌಹಾರ್ದ ವಾತಾವರಣ ಬೆಳೆಸಬೇಕು. ದೇಶ ಆಂತರಿಕವಾಗಿ ಸಶಕ್ತ ಆಗಬೇಕಿದೆ. ದೇಶ ಸೇವೆಗೆ ಜನತೆ ಮುಂದೆ ಬರಬೇಕಿದೆ. ಪ್ರಜಾಪ್ರಭುತ್ವದಲ್ಲಿ ವಿಭಿನ್ನ ಸಿದ್ಧಾಂತ ಹೊಂದಿರಬಹುದು, ಆದರೆ ನಮ್ಮ ಸಂಸ್ಕೃತಿ, ಸಂಸ್ಕಾರ ಮರೆಯಬಾರದು.

## ಅಮೆರಿಕದ ಸಂಸದ ಸುಹಾಸ್ ಭಗವದ್ಗೀತೆ ಹಿಡಿದು ಪ್ರಮಾಣವಚನ ಸ್ವೀಕಾರ



ಅಮೆರಿಕ ಕಾಂಗ್ರೆಸ್‌ಗೆ ಈಸ್ಟ್ ಕೋಸ್ಟ್‌ನಿಂದ ಆಯ್ಕೆಯಾಗಿರುವ ಮೊದಲ ಭಾರತೀಯ ಅಮೆರಿಕನ್ ಸುಹಾಸ್ ಸುಬ್ರಹ್ಮಣ್ಯಂ ಅವರು ಭಗವದ್ಗೀತೆ ಮುಂದಿಟ್ಟು ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಪವಿತ್ರ ಹಿಂದು ಗ್ರಂಥ ಹಿಡಿದು ಪ್ರಮಾಣವಚನ ಸ್ವೀಕರಿಸಿದರು. 43 ವರ್ಷದ ತುಳಸಿ ಗಬ್ಬಾರ್ಡ್ ಅವರು ಹೌಸ್ ಆಫ್ ರೆಪ್ರೆಸೆಂಟೇಟಿವ್‌ಗೆ ಚುನಾಯಿತರಾದ ಮೊದಲ ಹಿಂದು ಅಮೆರಿಕನ್ ಆಗಿದ್ದರು. ಅವರು ಗೀತೆಯ ಮೇಲೆ ಪ್ರಮಾಣ ವಚನ ಸ್ವೀಕರಿಸಿದ ಮೊದಲ ಜನಪ್ರತಿನಿಧಿ ಆಗಿದ್ದರು. ಹೌಸ್ ಆಫ್ ರೆಪ್ರೆಸೆಂಟೇಟಿಕ್ಸ್‌ನ ಸದಸ್ಯರಾಗಿ ಹವಾಯಿಯ ಎರಡನೇ ಕಾಂಗ್ರೆಷನಲ್ ಡಿಸ್ಟಿಕ್ ಪ್ರತಿನಿಧಿಸಿದ್ದ ಅವರು 2013ರ ಜನವರಿ 3ರಂದು ಪ್ರಮಾಣವಚನ ಸ್ವೀಕರಿಸಿದ್ದರು. ವರ್ಜೀನಿಯಾದಿಂದ ಬಂದ ಮೊದಲ ಭಾರತೀಯ ಅಮೆರಿಕನ್ ಮತ್ತು ದಕ್ಷಿಣ ಏಷ್ಯಾದ ಮೊದಲ ಕಾಂಗ್ರೆಸ್ಸಿಗನಾಗಿ ಪ್ರಮಾಣವಚನ ಸ್ವೀಕರಿಸುವುದಕ್ಕೆ ನನ್ನ ಹೆತ್ತವರು ಸಾಕ್ಷಿಯಾಗಿದ್ದಾರೆ ಎಂದು ಸುಬ್ರಹ್ಮಣ್ಯಂ ಖುಷಿ ಹಂಚಿಕೊಂಡಿದ್ದಾರೆ.

## ಪ್ರಬೋಧಿನೀ ಗುರುಕುಲ–ಅರ್ಜಿ ಆಹ್ವಾನ

ಪ್ರಬೋಧಿನೀ ಗುರುಕುಲದಲ್ಲಿ 2025–26ನೇ ಶೈಕ್ಷಣಿಕ ವರ್ಷದ ಅಧ್ಯಯನಕ್ಕಾಗಿ ಅರ್ಜಿಯನ್ನು ಆಹ್ವಾನಿಸಿದ್ದು, ಆಸಕ್ತರು ಪ್ರಬೋಧಿನೀ ಗುರುಕುಲದ ವಿಳಾಸಕ್ಕೆ 500 ರೂ.ಗಳನ್ನು M.O. ಕಳುಹಿಸುವ ಮೂಲಕ ಅರ್ಜಿಯನ್ನು ಪಡೆಯಬಹುದು. ಪ್ರಸ್ತುತ 5ನೇ ತರಗತಿ ಪರೀಕ್ಷೆ ಬರೆಯಲಿರುವ 11 ವರ್ಷ ತುಂಬಿದ ಗಂಡುಮಕ್ಕಳಿಗೆ ಪ್ರವೇಶ ನೀಡಲಾಗುತ್ತದೆ. ಗುರುಕುಲದ ಒಟ್ಟು ಕಲಿಕೆಯ ಅವಧಿ 12 ವರ್ಷಗಳಾಗಿದ್ದು, ಕೇಂದ್ರ ಸರಕಾರದ ರಾಷ್ಟ್ರೀಯ ಮುಕ್ತ ವಿದ್ಯಾಲಯ (NIOS) ದಿಂದ ಮಾನ್ಯತೆ ಪಡೆಯಲಾಗಿದೆ. ವಿದ್ಯಾರ್ಥಿಗಳು "ಭಾರತೀಯ ಜ್ಞಾನ ಪರಂಪರಾ" ವಿಭಾಗದ ಅಡಿಯಲ್ಲಿ 10ನೇ ತರಗತಿ ಹಾಗೂ ಪಿ.ಯು.ಸಿ. ಪರೀಕ್ಷೆಗಳನ್ನು ಬರೆಯುತ್ತಾರೆ, ಮುಂದೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದಲ್ಲಿ ಉನ್ನತ ವ್ಯಾಸಂಗ ಮಾಡುತ್ತಾರೆ. ವೇದ, ವಿಜ್ಞಾನ, ಯೋಗ, ಕೃಷಿ ಮತ್ತು ಕಲಾ ಎಂಬ ಪಂಚಮುಖೀ ಶಿಕ್ಷಣ ವ್ಯವಸ್ಥೆ ಇದೆ. ಆರ್ಷ ಪರಂಪರೆಯ ಅಧ್ಯಾತ್ಮ ಆಧಾರಿತ ಶಿಕ್ಷಣದೊಂದಿಗೆ, ಗಣಿತ, ವಿಜ್ಞಾನ, ಇತಿಹಾಸದ ಶಿಕ್ಷಣವನ್ನು ನೀಡಲಾಗುತ್ತದೆ.

**ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ 15–03–2025**

**M.O. ಕಳುಹಿಸಬೇಕಾದ ವಿಳಾಸ:** ವ್ಯವಸ್ಥಾಪಕರು, ಪ್ರಬೋಧಿನೀ ಗುರುಕುಲ, ಚಿತ್ರಕೂಟ, ಅದ್ದಡ ಗ್ರಾಮ, ಹರಿಹರಪುರ ಅಂಚೆ, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ – 577120.

**ಸಂಪರ್ಕಿಸಿ:** 9663300058, 8073570250, 8296392063. ಸಂಪರ್ಕದ ಸಮಯ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ಮಾತ್ರ.



## ಉತ್ತರಖಂಡದಲ್ಲಿ ಯುಸಿಸಿ ಅನುಮೋದನೆ

ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ನೇತೃತ್ವದ ಉತ್ತರಾಖಂಡ ಸರ್ಕಾರವು ಸೋಮವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಏಕರೂಪ ನಾಗರಿಕ ಸಂಹಿತೆಗೆ (ಯುಸಿಸಿ) ಅನುಮೋದನೆ ನೀಡಿದೆ. ಗಣರಾಜ್ಯೋತ್ಸವ ಅಥವಾ ಜ. 28ರಂದು ರಾಷ್ಟ್ರೀಯ ಕ್ರೀಡಾಕೂಟದ ಉದ್ಘಾಟನೆಗೆ ನರೇಂದ್ರ ಮೋದಿ ರಾಜ್ಯಕ್ಕೆ ಭೇಟಿ ನೀಡಿದಾಗ ಈ ಕಾನೂನು ಜಾರಿಗೊಳ್ಳಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಏಕರೂಪ ನಾಗರಿಕ ಸಂಹಿತೆ ತರುವ ನಿಟ್ಟಿನಲ್ಲಿ ದೊಡ್ಡ ಹೆಜ್ಜೆಯನ್ನಿಟ್ಟಿರುವ ಉತ್ತರಾಖಂಡ ಸರ್ಕಾರವು ನೋಂದಣಿಗಾಗಿ ಅತ್ಯಾಧುನಿಕ ಪೋರ್ಟಲ್ ಅನ್ನು ಪ್ರಾರಂಭಿಸಿದೆ. ಈ ಪೋರ್ಟಲ್ ಅನ್ನು ಮಾಹಿತಿ ತಂತ್ರಜ್ಞಾನ ಅಭಿವೃದ್ಧಿ ಸಂಸ್ಥೆ (ITDA) ಉನ್ನತ ಭದ್ರತಾ ಮಾನದಂಡಗಳು ಮತ್ತು ವೇಗದ ಸಂಸ್ಕರಣೆಯ ವೇಗದೊಂದಿಗೆ ಅಭಿವೃದ್ಧಿಪಡಿಸಿದೆ. ಈ ಪೋರ್ಟಲ್ ಅನ್ನು ರಾಷ್ಟ್ರೀಯ ಡೇಟಾ ಸೆಂಟರ್‌ನಲ್ಲಿ ಆಯೋಜಿಸಲಾಗಿದೆ, ಇದು ಸೈಬರ್ ದಾಳಿಯಿಂದ ಸುರಕ್ಷಿತವಾಗಿದೆ ಎಂದು ಐಟಿಡಿಎ ನಿರ್ದೇಶಕಿ ನಿಕಿತಾ ಖಂಡೇಲ್ವಾಲ್ ತಿಳಿಸಿದರು.




ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.